ಗೌರ್ನಮೆಂಟಿಗೆ ಒತ್ತಾಯ ಮಾಡಿ, ಈ ವರ್ಷದೆ ಒಳಗಾಗಿಯೇ ಇದಕ್ಕೆ ಲೈಸನ್ಸ್ ದೊರಕತಕ್ಕದ್ದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ. ಹಾಗೂ ಇಲ್ಲಿ ೨೦ ಲಕ್ಷ ಟನ್ ಕಬ್ಬನ್ನು ಬೆಳೆಯುತ್ತಿರುವಾಗ, ಅಲ್ಲಿರತಕ್ಕಂಥ ಒಂದೇ ಒಂದು ಫ್ಯಾಕ್ಟರಿಗೆ ಇದನ್ನು ಆರೆಯಂತಕ್ಕ ಸಾಮರ್ಥ್ಯ ಇಲ್ಲ ಎಂದು ಕಂಡು ಬಂದಿರುವುದರಿಂದ ಮಾನ್ಯ ಮಂತ್ರಿಯವರು ಎಷ್ಟು ದಿವಸದ ಒಳಗಾಗಿ ಇನ್ನೊಂದಂ ಸಕ್ಕರೆ ಕಾರ್ಖಾನೆಗೆ ಲೈಸೆನ್ಸ್ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ಕೇಳುತ್ತೇನೆ.

ಶ್ರೀ ಜೆ-ಹೆಚ್.ಪಟೇಲ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಂಚಿಯೇ ಸಲ್ಲಿಸಿದ್ದ ಅರ್ಜಿಯಾದರೂಕೂಡಾ, ಹಲವು ಕಾರಣಗಳಿಂದ ಇದು ತಿರಸ್ಕರಿಸಲ್ಪಟ್ಟಿತ್ತು. ಭಾರತ ಸರಕಾರದ ನಿಯಮಗಳ ಪ್ರಕಾರ ಯಾವುದೇ ಸಕ್ಕರೆ ಕಾರ್ಖಾನೆಗೆ ೨೫೦೦ ಟನ್ ಕಬ್ಬನ್ನು ಆರೆಯಂತಕ್ಕಂಥ ಸಾಮರ್ಥ್ಯ ಇರಬೇಕಂ. ಈ ಮುಂಚೆ ೧೨೫೦ ಟನ್ ಕಬ್ಬನ್ನು ಆರೆಯತಕ್ಕಂಥ ಹಲವಾರು ಕಾರ್ಖಾನೆಗಳಿಗೆ ಪರವಾನಗಿಯನ್ನು, ಖಾಸಗಿ, ಸಹಕಾರಿಹಾಗೂ ಜಂಟಿ ವಲಯದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ನೀಡಿದ್ದಾರೆ. ಪರಿಷ್ಕೃತ ನೀತಿಯ ಪ್ರಕಾರ ೨೫೦೦ ಟನ್ ಕಬ್ಬನ್ನು ಆರೆಯುವ ಸಾಮರ್ಥ್ಯ ತೋರಿಸಿದರೆ ಮಾತ್ರ ಲೈಸೆನ್ಸ್ ಕೊಡುತ್ತಾರೆ. ಅದಕ್ಕನುಸಾರವಾಗಿ ಇವರು ಯೋಜನೆಯನ್ನು ಪರಿಷ್ಕರಿಸಿದ್ದಾರೆ. ಅದನ್ನು ಸಮರ್ಥಿಸಿ ರಾಜ್ಯ ಸರಕಾರ ರೆಕಮೆಂಡ್ ಮಾಡಿರುತ್ತದೆ. ಅವರಿಗೆ ಪರವಾನಗಿ ಸಿಗತಕ್ಕಂಥ ಅವಕಾಶ ಇದೆ. ಮತ್ತೊಂದು ಈ ಸಂದರ್ಭದಲ್ಲಿ ನಾನು ಹೇಳುವುದು ಎಂದರೆ, ನಮ್ಮ ರಾಜ್ಯದಲ್ಲಿ ಬೆಳೆಯುವ ಹೆಚ್ಚಿನ ಕಬ್ಬು ಏನಿದೆ ಅದು ಬೇರೆ ರಾಜ್ಯಗಳಿಗೆ ಹೋಗುತ್ತಿದೆ ನಿಜ. ಈ ರೀತಿ ಬೇರೆ ರಾಜ್ಯಗಳಿಗೆ ಹೋಗುವುದಕ್ಕೆ ಹಲವಾರು ಕಾರಣಗಳಿವೆ. ಅದನ್ನು ನಾನು ಬೇರೆ ಸಮಯದಲ್ಲಿ ಪ್ರಸ್ತಾಪ ಮಾಡುತ್ತೇನೆ.

ಶ್ರೀಮತಿ ಲೀಲಾದೇವಿ.—ಆರ್. ಪ್ರಸಾದ್.—ಸ್ವಾಮಿ, ಬೇರೆ ರಾಜ್ಯಕ್ಕೆ ಕಬ್ಬು ಹೋಗತ್ತಿರುವಂತಹ ವಿಷಯವನ್ನು ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಇದನ್ನು ತಡೆಗಟ್ಟಬೇಕಾದರೆ ೨೫೦೦ ಟನ್ ಕಬ್ಬನ್ನು ಆರೆಯುವಂಥ ಸಾಮರ್ಥ್ಯ ಇರುವಂತಹ ಕಾರ್ಖಾನೆಗಳು ನಮ್ಮಲ್ಲಿ ಇವೆ, ಹಾಗೂ ಕಬ್ಬೂ ಸಹ ಸಾಕಷ್ಟು ಬರುತ್ತಿದೆ ಎಂಬುದನು ಮನಗಂಡು, ಈ ಕಾರ್ಖಾನೆಗೆ ರೆಕಮೆಂಡ್ ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ಕೇಂದ್ರಕ್ಕೆ ಒತಾಯ್ಸ ಮಾಡಿ ಸಾಧ್ಯವಾದಷ್ಟು ಬೇಗೆ ಇದಕ್ಕೆ ಲೈಸೆನ್ಸ್ ದೊರಕುವಂತೆ ಮಾಡಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಜೆ.ಹೆಚ್. ಪಟೇಲ್.—ಆಗಬಹುದು.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೧ (೨೨೩)ಕ್ಕೆ ಗೃಹ ಖಾತೆಯವರು ಉತ್ತರ ನೀಡುತ್ತಾರೆ. ಆದುದರಿಂದ ಇದನ್ನು ಮುಂದೂಡಲಾಗಿದೆ. ಇವತ್ತು ತೆಗೆದುಕೊಳ್ಳುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಸೌಲಭ್ಯ ಒದಗಿಸಬೇಕಾಗಿರುವ ಹಳ್ಳಿಗಳ ಬಗ್ಗೆ.

೬೨. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿದ್ಯುತ್ ಸೌಲಭ್ಯ ಒದಗಿಸಬೇಕಾಗಿರುವ ಹಳ್ಳಿಗಳು ಎಷ್ಟು ?

ಆ) ಇವುಗಳಲ್ಲಿ ಮುಖ್ಯ ಹಳ್ಳಿಗಳು ಎಷ್ಟು ಹಾಗೂ ದಾಖಲೆ ಗ್ರಾಮಗಳು ಎಷ್ಟು (ಹ್ಯಾಮ್ಲೆಟ್)

ಇ) ಆ ಪೈಕಿ ಈಗಾಗಲೇ ಎಷ್ಟು ಹಳ್ಳಿಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಬಾಕಿ ಉಳಿದಿರುವ ಹಳ್ಳಿಗಳಿಗೆ ಇನ್ನು ಎಷ್ಟು ವರ್ಷಗಳಲ್ಲಿ ವಿದ್ಯುತ್ ಒದಗಿಸಲಾಗುವುದು.

ಈ) ವಿದ್ಯುತ್ ಒದಗಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ೧೯೭೧ರ ಜನಗಣತಿಯಂತೆ ೩೧-೧೨-೮೭ರಂದು ೧೮೨ ಹಳ್ಳಿಗಳಿಗೆ ಹಾಗೂ ೧೯೮೧ರ ಜನಗಣತಿಯಂತೆ ೬೧೯ ಹಳ್ಳಿಗಳಿಗೆ ವಿದ್ಯುತ್ ಒದಗಿಸಬೇಕಾಗಿದೆ.

ಆ) ೧೯೭೧ರ ಜನಗಣತಿಯಂತೆ ೧೮೨೨ ಹಳ್ಳಿಗಳು ದಾಖಲೆ ಗ್ರಾಮಗಳು ಇಲ್ಲ. ೧೯೮೧ ಜನಗಣತಿಯಂತೆ ೬೧೯ ಹಳ್ಳಿಗಳು ೨೪೯೭ ದಾಖಲೆ ಗ್ರಾಮಗಳು.

ಇ) ೧೯೭೧ರ ಜನಗಣತಿಯಂತೆ ಉಳಿದಿರುವ ೧೮೨೨ ಹಳ್ಳಿಗಳಿಗೆ ೩೧-೩-೮೮ರ ಒಳಗಡೆ ವಿದ್ಯುದ್ದೀಕರಣಗೊಳಿಸಲಾಗುವುದು. ೧೯೮೧ರ ಜನಗಣತಿಯಂತೆ ಉಳಿದಿರುವ ೬೧೯ ಹಳ್ಳಿಗಳ ವಿದ್ಯುದ್ದೀಕರಣವನ್ನು ೧೯೮೮-೮೯ರಲ್ಲಿ ಪೂರ್ಣಗೊಳಿಸಲಾಗುವುದು. ಹಳ್ಳಿಗಳ ವಿದ್ಯುದ್ದೀಕರಣವಾದ ನಂತರ ದಾಖಲೆ ಗ್ರಾಮಗಳ (ಹ್ಯಾಮ್ಲೆಟ್) ವಿದ್ಯುದ್ದೀಕರಣವನ್ನು ತೀವ್ರಗೊಳಿಸಲಾಗುವುದು. ೩೧-೩-೮೭ರಂದು ೭೦೪೮ ದಾಖಲೆ ಗ್ರಾಮಗಳ ವಿದ್ಯುದ್ದೀಕರಣವಾಗಿದೆ.

ಈ) ಇ) ಗೆ ಒದಗಿಸಿದ ಉತ್ತರ ಇದಕ್ಕೂ ವಿನ್ಹಯಿಸುತ್ತದೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕಂಥ ಸಂದರ್ಭದಲ್ಲಿ ಜನಗಣತಿಯನ್ನು ಆಧಾರವನ್ನಾಗಿಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ. ಯಾವ ಯಾವ ಹಳ್ಳಿಗಳು ವಿದ್ಯುದೀಕರಣವಾಗಿರುವುಲ್ಲವೋ ಅಂತಹ ಹಳ್ಳಿಗಳನ್ನು ಪಟ್ಟಿ ಮಾಡಿ ವಿದ್ಯುಚ್ಛಕ್ತಿಯನ್ನು ಒದಗಿಸಬಹುದು. ಈಗಾಗಲೇ ನಮ್ಮ ರಾಜ್ಯದಲ್ಲಿ ಹ್ಯಾಮ್ಲೆಟ್ಸ್, ಹಳ್ಳಿಗಳು ವಿದ್ಯುದೀಕರಣವಾಗದೇ ಇರತಕ್ಕಂಥವುಗಳ ಬೇಕಾದಷ್ಟು ಇವೆ. ಆದರೆ ತಾವು ಜನಗಣತಿಯ ಆಧಾರದ ಮೇಲೆ ವಿದ್ಯುದ್ದೀಕರಣ ಮಾಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮಲ್ಲಿ ಸರಿಯಾಗಿ ಟ್ರಾನ್ಸ್‌ಫಾರ್ಮರ್ಸ್ ಇಲ್ಲ, ಸರಿಯಾದ ಮೆಟರೀಯಲ್ಸ್ ಇಲ್ಲ. ಆದ್ದರಿಂದ ತಾವು ಒಂದು ನಿಗಧಿತ ಕಾರ್ಯಕ್ರಮವನ್ನು ಹಾಕಿಕೊಂಡು ಎಲ್ಲಾ ಹಳ್ಳಿಗಳಿಗೂ ವಿದ್ಯುೀಕರಣ ಮಾಡುತ್ತೀರಾ ? ಮತ್ತು ಭಾಗ್ಯ ಕಾರ್ಯಕ್ರಮದ ಅಡಿಯಲ್ಲಿ ತಾವು ಬಡವರಿಗೆ ವಿದ್ಯುತ್ ದೀಪಗಳನ್ನು ಒದಗಿಸಿಕೊಡುತ್ತಿದ್ದೀರಿ. ಆದರೆ ಇತ್ತೀಚೆಗೆ ಕೆಲವು ಹಳ್ಳಿಗಳಲ್ಲಿ ಈ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಒದಗಿಸಿದ್ದಂತಹ ದೀಪಗಳನ್ನು ಕಿತ್ತು ಹಾಕಿದ್ದೀರಿ.

ಅಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆ ಕೇಳಿ. ಭಾಷಣ ಮಾಡಬೇಡಿ.

ಶ್ರೀ ಎಂ. ಶಿವಣ್ಣ.—ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ ಅಧ್ಯಕ್ಷರೇ ? ಈಗ ಭಾಗ್ಯ ಜ್ಯೋತಿ ಯೋಜನೆ ಯಡಿಯಲ್ಲಿ ಕೊಟ್ಟಿದ್ದಂತಹ ದೀಪಗಳನ್ನು ಸರ್ಕಾರದವರು ಕಿತ್ತು ಹಾಕಲು ಕಾರಣವೇನು ? ಈಗ ಆ ಯೋಜನೆ ಯಡಿಯಲ್ಲಿ ವಿದ್ಯುತ್ ದೀಪಗಳನ್ನು ಹಾಕಿಸಿಕೊಡಲು ಯಾವ ಯಾವ ಕಾರ್ಯಕ್ರಮಗಳನ್ನು ಈಗ ಹಾಕಿಕೊಂಡಿದ್ದೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ ವಿದ್ಯುದ್ದೀಕರಣ ಯೋಜನೆ ಯಡಿಯಲ್ಲಿ ಮೊದಲು ಯಾವ ಹಳ್ಳಿಯಲ್ಲಿ ಹೆಚ್ಚು ಜನ ವಾಸ ಮಾಡುತ್ತಿರುತ್ತಾರೋ ಅಲ್ಲಿಗೆ ಅವಶ್ಯಕವಾಗಿ ವಿದ್ಯುಚ್ಛಕ್ತಿ ಕೊಡಬೇಕೆನ್ನುವುದು ನಮ್ಮ ಯೋಜನೆ. ಆದೇ ರೀತಿಯಲ್ಲಿ ಈಗ ಕಂಡಿಯುವ ನೀರನ್ನು ಸಹ ಹೆಚ್ಚು ಜನ ವಾಸ ಮಾಡುವಂತಹ ಹಳ್ಳಿಗಳಿಗೆ ಮೊದಲು ಒದಗಿಸಿ ಕೊಡುತ್ತಾರೆ. ಆಮೇಲೆ ಬೇರೆ ಬೇರೆ ಹಳ್ಳಿಗಳಿಗೆ ಕೊಡುತ್ತಾರೆ. ೧೯೭೫ ರಿಂದ ೧೯೮೫ನೇ ಇಸವಿ ಯವರೆವಿಗೆ ಆವೇರೇಜ್ ಒಂದು ವರ್ಷಕ್ಕೆ ವಿದ್ಯುದ್ದೀಕರಣವಾಗಿರುವುದು ಕೇವಲ ೬೫೦ ಹಳ್ಳಿಗಳು ಮಾತ್ರ. ಆದರೆ ೧೯೮೫ನೇ ಇಸವಿಯಿಂದ ೧೯೮೭ನೇ ಇಸವಿಯವರೆವಿಗೆ ಆವೇರೇಜ್ ಒಂದು ವರ್ಷಕ್ಕೆ ೨೨೦೦ ಹಳ್ಳಿಗಳು ವಿದ್ಯುದ್ದೀಕರಣವಾಗುತ್ತಿವೆ. ಇನ್ನು ಮಾನ್ಯ ಸದಸ್ಯರು ಹ್ಯಾಮ್ಲೆಟ್ಸ್ ಬಗ್ಗೆ ಮಾತನಾಡಿದರು. ಒಂದು ಆಲದ ಮರದ ಕೆಳಗಡೆ ನಾಲ್ಕು ಮನೆಗಳನ್ನು ಕಟ್ಟಿಕೊಂಡು ಅದಕ್ಕೆ ಆಲದ ಮರ ಪಾಳ್ಯ ಎಂದು ಹೆಸರನ್ನಿಟ್ಟುಕೊಳ್ಳುತ್ತಾರೆ. ಆಗ ಅಂತಹ ಹಳ್ಳಿಗಳನ್ನು ಸಹ ನಾವು ಲೆಕ್ಕಕ್ಕೆ ತೆಗೆದುಕೊಂಡು ವಿದ್ಯುದ್ದೀಕರಣ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದೇ ರೀತಿ ಈಗಾಗಲೇ ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿರುವ ಎಲ್ಲಾ ಹ್ಯಾಮ್ಲೆಟ್ಸ್‌ಗಳನ್ನು ತೆಗೆದುಕೊಂಡು ವಿದ್ಯುದ್ದೀಕರಣ ಮಾಡಿದ್ದೇವೆ. ಇನ್ನು ಭಾಗ್ಯಜ್ಯೋತಿ ಯೋಜನೆಯ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿಲ್ಲ. ಆದರೂ ಸಹ ಆ ಬಗ್ಗೆ ಮಾಹಿತಿಯನ್ನು ನಾನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ. ಭಾಗ್ಯಜ್ಯೋತಿ ಯೋಜನೆಯಡಿ ಉತ್ತಮವಾದ ಕೆಲಸ ಮಾಡಿದ್ದೇವೆ.